# ಭಲೇ ಬಸಮ್ಮ

ಗೀತಾ ಎಸ್. ತಾಮಗಾಳೆ
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – ೫೮೧ ೧೩೫
☎: ೯೪೪೮೫ ೫೨೭೪೫ ಮಿಂಚಂಚೆ: geetamkvk@gmail.com

**ಮನಸ್ಸಿದ್ದಲ್ಲಿ ಮಾರ್ಗವಿದೆ. ಮನಸ್ಸಿದಲ್ಲಿ ಕನಸು ನನಸಾಗುತ್ತದೆ. ಮಹಿಳೆಯೊಬ್ಬಳು ಆರ್ಥಿಕ ಸಂಕಷ್ಟದಿಂದ ಹೇಗೆ ಪಾರಾಗಬಹುದೆಂಬುದಕ್ಕೆ ಶ್ರೀಮತಿ ಬಸಮ್ಮ ಉತ್ತಮ ಉದಾಹರಣೆ. ಇಂತಹ ಯಶೋಗಾಥೆಗಳನ್ನು ಓದಿ, ಕೇಳಿ ಸ್ಫೂರ್ತಿಗೊಳಗಾಗುವವರು ಹಲವಾರು ಜನ. ಹೊಸ ಹುರುಪಿನೊಂದಿಗೆ ತಾವೂ ಹೈನುಗಾರಿಕೆ ಮುಂತಾದ ಜೀವನೋಪಾಯ ಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಕೇವಲ ಹುರುಪು ಒಂದೇ ಇದ್ದರೇ ಸಾಲದು, ಶ್ರೀಮತಿ ಬಸಮ್ಮನವರಂತಹವರ ಬದ್ಧತೆ ಬೇಕು. ಅವರು ಸುರಿಸುವ ಬೆವರಿನ ಬೆಲೆ ತಿಳಿಯಬೇಕಾದರೆ ಆವರಿಸಿರುವ ಕಷ್ಟವನ್ನು ನಿವಾರಿಸುವ ಛಲ ಮತ್ತು ಶ್ರಮ ಎರಡೂ ಬೇಕು. ಮುಂದಕ್ಕೆ ಬರಬೇಕು ಎನ್ನುವವರಿಗೆ ಇಂತಹ ಲೇಖನಗಳು ಮುನ್ನುಡಿ ಹಾಕುತ್ತವೆ.**



ವ್ಯವಸಾಯ ಮಾಡಿ ನಷ್ಟ ಅನುಭವಿಸಿ ಇನ್ನು ಕೃಷಿಯೇ ಬೇಡ ಎಂದು ಉದ್ಯೋಗ ಅರಸಿ ಪಟ್ಟಣಗಳಿಗೆ ಹೋದ ಅನೇಕರ ನಡುವೆ ಕೆಚ್ಚೆದೆಯಿಂದ ಕೃಷಿ ಮಾಡಿ ಜೀವನ ಕಟ್ಟಿಕೊಂಡ ರೈತರು ಬಹಳ ವಿರಳ. ಇಂಥವರಲ್ಲಿ ಮಹಿಳೆಯಾಗಿ, ಕೃಷಿ ಬಗ್ಗೆ ಹೆಚ್ಚು ಅನುಭವವಿಲ್ಲದಿದ್ದರೂ ಉತ್ತಮವಾಗಿ ಕೃಷಿಯೊಂದಿಗೆ ಹೈನುಗಾರಿಕೆ ಮಾಡಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿರುವವರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ **ಶ್ರೀಮತಿ ಬಸಮ್ಮ ಬದಾಮಗಟ್ಟಿಯವರು.** "ಅಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಶ್ರೀಮತಿ **ಬಸಮ್ಮನವರು** ಪೋಸ್ಟ್ ಕಛೇರಿಯ ಆರ್. ಡಿ. ಏಜಂಟ್ ಆಗಿ, ಬಿಸಿಯೂಟ ಸಹಾಯಕರಾಗಿ, ಆಶಾ ಕಾರ್ಯಕರ್ತೆಯಾಗಿ, ಮನೆಕೆಲಸ ಮಾಡಿ ಕೊನೆಗೆ ಕೃಷಿಯನ್ನೇ ನಂಬಿ ಸ್ವಾವಲಂಬಿ ಬಾಳ್ವೆ ನಡೆಸುತ್ತಿದ್ದಾರೆ.

ಶಿಗ್ಗಾಂವ ತಾಲ್ಲೂಕಿನ ಜೇಕಿನಕಟ್ಟಿಯವರಾದ ಶ್ರೀಮತಿ **ಬಸಮ್ಮನವರು** ೭ನೇ ತರಗತಿಯವರೆಗೆ ಓದಿದ್ದು ಚಿಕ್ಕ ವಯಸ್ಸಿನಲ್ಲಿಯೇ ಅವರ ಸೋದರ ಮಾವನೊಂದಿಗೆ ಬಾಲ್ಯವಿವಾಹವಾಗಿ ಶಿಗ್ಗಾಂವಿಗೆ ಬಂದರು. ಮದುವೆಯಾದ ನಂತರ ಕುಟುಂಬದ ಇತರೆ ಜವಾಬ್ದಾರಿಗಳೊಂದಿಗೆ ಕೂಲಿ ಕೆಲಸಕ್ಕೆ ಹೋಗಲು ಪ್ರಾಂಭಿಸಿದರು. ಕೇವಲ ಕೂಲಿ ಕೆಲಸದಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಅರಿತ ಇವರು ೨೦೦೬ ರಲ್ಲಿ ತಮ್ಮ ಗೆಳತಿಯೊಬ್ಬಳ ಜೊತೆಗೆ ಸೇರಿ ತಮ್ಮ ಬಳಿಯಿದ್ದ ಚಿನ್ನದ ಉಂಗುರ ಹಾಗೂ ಆಕಳು ಮಾರಿ ಬಂದಂತಹ ಹಣವನ್ನು ಸೇರಿಸಿ ೩ ಎಕರೆ ಜಮೀನನ್ನು ಲಾವಣಿಗೆ ಹಾಕಿಕೊಂಡು ತಮ್ಮ ಕೃಷಿ ಜೀವನವನ್ನು ಪ್ರಾರಂಭಿಸಿದರು. ವರ್ಷದ ಕೊನೆಗೆ ಖರ್ಚು ಕಳೆದು ಅವರಿಗೆ ಸಿಕ್ಕ ಲಾಭ ಕೇವಲ ೫೦೦೦ ರೂಪಾಯಿಗಳು. ಈ ಲಾಭದಿಂದ ಅಷ್ಟೇನೂ ಪ್ರಯೋಜನವಾಗುವುದಿಲ್ಲ ಎಂದು ತಿಳಿದು ಕೆಲವೊಂದು ಮನೆಗಳಿಗೆ ಮನೆಕೆಲಸಕ್ಕಾಗಿ ಹೋಗುತ್ತಾ, ಪೋಸ್ಟ ಆಫೀಸಿನ ಆರ್. ಡಿ. ಏಜೆಂಟ್ ಆಗಿ ಸಹ ಕೆಲಸ ಮಾಡತೊಡಗಿದರು. ಇದರಿಂದ ತಿಂಗಳಿಗೆ ಸುಮಾರು ೧೩೦೦ ರೂಗಳಷ್ಟು ಗಳಿಸಲಾರಂಭಿಸಿದರು. ಮನೆಕೆಲಸಗಳಿಗೆ ಬೆಳಗ್ಗೆ ಹೋಗುವುದರ ಜೊತೆಗೆ ೨೦೦೭ ರಿಂದ ಗ್ರಾಮದ ಶಾಲೆಯಲ್ಲಿ ಬಿಸಿಯೂಟ ಕಾರ್ಯಕ್ರಮದಲ್ಲಿ ಸಹಾಯಕಿಯಾಗಿ ಸೇರಿಕೊಂಡರು. ಆಶಾ ಕಾರ್ಯಕರ್ತೆಯಾಗಿ ಸಹ ಸೇವೆ ಸಲ್ಲಿಸಿದರು.

ಶ್ರೀಮತಿ ಬಸಮ್ಮನವರ ಪತಿ ಕೂಲಿ ಮಾಡುತ್ತಿದ್ದು, ಎರಡು ಮಕ್ಕಳನ್ನಿಟ್ಟುಕೊಂಡು ಮನೆ ನಡೆಸಿಕೊಂಡು ಹೋಗುವುದು ತೊಂದರೆಯಾಗುವ ಕಾರಣ ಆದಾಯಕ್ಕೆ ಅನುಕೂಲವಾಗಲಿ ಎಂದು ಆಪ್ತರಿಂದ ಶೇ. ೫ರ ಬಡ್ಡಿದರದಲ್ಲಿ ೨೦,೦೦೦ ರೂಪಾಯಿಗಳ ಸಾಲವನ್ನು ಪಡೆದು ಆಕಳು ಖರೀದಿಸಿದರು. ಇದೇ ಅವರ ಸುಖ ಜೀವನಕ್ಕೆ ಸೋಪಾನವಾಗಿ ಮಾರ್ಪಾಡಾಯಿತು. ಖರೀದಿಸಿದ ಆಕಳು ಪ್ರತಿದಿನ ೮–೧೩ ಲೀಟರ್ ಹಾಲು ನೀಡುತ್ತಿತ್ತು. ಹಸುವಿಗೆ ಮೇವಿನ ಸಲುವಾಗಿ ಬಿಸಿ ಅಡುಗೆ ಕೆಲಸದ ನಂತರ ಸಾಯಂಕಾಲ ಊರ ಸುತ್ತಮುತ್ತಲಿನಿಂದ ಮೇವನ್ನು ಕೊಯ್ದುಕೊಂಡು ಬರುವುದರೊಂದಿಗೆ ಅವರ ಯಜಮಾನರೂ ಸಹ ಕೂಲಿ ಮಾಡಿ ಬರುವಾಗ ತರುತ್ತಿದ್ದ ಮೇವನ್ನು ಸಹ ಸಮರ್ಪಕವಾಗಿ ಬಳಸಿದ್ದು ಉಂಟು. ಹಾಲಿನ ಮಾರಾಟದಿಂದ ವರ್ಷಗಳಲ್ಲಿಯೇ ಸಾಲ ತೀರಿಸಿ ೧೦ ಸಾವಿರ ಲಾಭ ಪಡೆದರು. ಹೀಗೆ ಆಕಳಿನಿಂದ ಬಂದ ೧೦,೦೦೦ ರೂಪಾಯಿ ಲಾಭದೊಂದಿಗೆ ಮನೆಯಲ್ಲಿದ್ದ ಹಳೆಯ ಕೊಡಪಾನ, ಹಂಡೆ ಮಾರಿ ಒಟ್ಟು ೨೦,೦೦೦ ರೂಪಾಯಿಗಳನ್ನು ಹೊಂದಿಸಿಕೊಂಡು ಮತ್ತೊಂದು ಹಸು ಖರೀದಿಸಿದರು. ಎರಡು ಹಸುಗಳಾದ ನಂತರ ಅವುಗಳ ಕೆಲಸ ಹೆಚ್ಚಾಗಿ ಮನೆಕೆಲಸವನ್ನು ಸಂಪೂರ್ಣವಾಗಿ ಬಿಟ್ಟರು. ಎರಡು ಹಸುಗಳಿಂದ ಪ್ರತಿದಿನ ೪೦ ಲೀಟರ್ ಹಾಲು ಹಾಕುವುದರಿಂದ ಪ್ರಾರಂಭವಾದ ಅವರ ಕೆ.ಎಂ.ಎಫ್. ಜೊತೆಗಿನ ಒಡನಾಟ ಅಲ್ಲಿಗೆ ನಿಲ್ಲದೇ ಕೆ.ಎಂ.ಎಫ್ ಸಿಬ್ಬಂದಿಯಿಂದ ಎಲ್ಲ ತಾಂತ್ರಿಕ ಸಹಾಯ ಹಾಗೂ ಸೌಲಭ್ಯಗಳ ಸದುಪಯೋಗ ಪಡೆದುಕೊಂಡರು. ಈ ಮದ್ಯ ನಬಾರ್ಡನ ಸಹಾಯದಿಂದ ೩.೫೦ ಲಕ್ಷ ಸಹಾಯ ಪಡೆದು ಅವರ ಸ್ವಂತ ಜಮೀನನಲ್ಲಿ (೧.೧೪ ಎಕರೆ) ಹಸುವಿಗೆ ಕೊಟ್ಟಿಗೆ ಹಾಗೂ ನೀರಿಗಾಗಿ ಬೋರ್ ಹಾಕಿಸಿ ಸಂಸಾರವನ್ನು ಶಿಗ್ಗಾವಿನಿಂದ ೨–೩ ಕಿ.ಮೀ. ದೂರವಿರುವ ತಮ್ಮ ಜಮೀನಿಗೆ ಸ್ಥಳಾಂತರಿಸಿದರು. ಹೈನುಗಾರಿಕೆಗೆ ಸಹಾಯವಾಗಲೆಂದು ೧೦ ಗಂಟೆ ಜಮೀನಿನಲ್ಲಿ ಮೇವಿನ ಬೆಳೆಗಳನ್ನು ಹಾಗೂ ಬದುಗಳಲ್ಲಿ ಹುಲ್ಲು ಬೆಳೆಯತೊಡಗಿದರು. ಅಂತರ್ಜಲ ಚೆನ್ನಾಗಿದ್ದು ಬೋರಿನಿಂದ ಸಾಕಷ್ಟು ಪ್ರಮಾಣದ ನೀರು ಲಭ್ಯವಾದ ಕಾರಣ ಇರುವ ಒಂದು ಎಕರೆಯೊಂದಿಗೆ ತಮ್ಮ ಜಮೀನಿನ ಪಕ್ಕದ ಒಂದೂವರೆ ಎಕರೆ ಲಾವಣಿಗೆ ಹಾಕಿಕೊಂಡು ತರಕಾರಿ ಬೆಳೆಗಳಾದ ಚವಳೆ, ಬದನೆ, ಟೊಮ್ಯಾಟೊ, ಹೂವಿನ ಬೆಳೆಯಾದ ಗೆಲಾರ್ಡಿಯಾ ಬೆಳೆಯುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಕರಿಬೇವು ಜೊತೆಗೆ ಜೋಳ, ಅಲಸಂದೆ, ಮಾವು, ತೆಂಗಿನ ಗಿಡ ಹಾಗೂ ಮೇವಿನ ಬೆಲೆಗಳನ್ನು ಸಹ ಹಾಕಿಕೊಂಡಿದ್ದಾರೆ. ಕಳೆದ ವರ್ಷ ಸುಮಾರು ೪೨,೦೦೦ ರೂಗಳ ಗೋವಿನಜೋಳ, ೨೫ ಸಾವಿರದ ಬೀನ್ಸ್, ೧೫ ಸಾವಿರದ ಇತರೆ ತರಕಾರಿ ಬೆಳೆದಿದ್ದಾರೆ. ಕೆ.ಎಂ.ಎಫ್. ನೆರವಿನಿಂದ ಹಾಲು ಹಿಂಡುವ ಯಂತ್ರವನ್ನು ಖರೀದಿಸಿದ್ದು ಅದರಿಂದ ಹಾಲು ಹಿಂಡುವುದರಿಂದ ಬಹಳಷ್ಟು ಸಮಯದ ಉಳಿತಾಯ ಆಗಿದೆ ಎಂಬುದು ಇವರ ಅಭಿಪ್ರಾಯ. ಈ ವರ್ಷ ಮೆಣಸಿನಕಾಯಿ ಬೆಳೆದ ಇವರು ದಲ್ಲಾಳಿಗಳಿಗೆ ಮಾರಾಟ ಮಾಡುವುದರಿಂದ ಹೆಚ್ಚಿನ ಲಾಭವಿಲ್ಲವೆಂದು ಅರಿತು ಶಿಗ್ಗಾಂವಿಯ ಅಕ್ಕಪಕ್ಕದ ಢಾಬಾಗಳನ್ನು ಸಂಪರ್ಕ ಪಡೆದು ನೇರವಾಗಿ ಅವರಿಗೇ ಮಾರಾಟ ಮಾಡಿ ಹೆಚ್ಚಿನ ಲಾಭಗಳಿಸಿದ್ದಾರೆ. ಇನ್ನು ಮುಂದೆ ಢಾಬಾಗಳಿಗೆ ಬೇಕಾಗುವ ಕೆಲವೊಂದು ಸೊಪ್ಪು, ತರಕಾರಿಗಳನ್ನಷ್ಟೇ ಬೆಳೆದು ನೇರವಾಗಿ ಅವರಿಗೆ ಮಾರಿ ತಮ್ಮ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸಿಕೊಳ್ಳುವ ಕನಸು ಸಹ ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ಎರೆಹುಳು ಗೊಬ್ಬರ ಘಟಕ ಹಾಗೂ ಕುರಿಸಾಕಾಣಿಕೆಯನ್ನು ಪ್ರಾರಂಭಿಸಿ ಸಂಪನ್ಮೂಲಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಹೆಬ್ಬಯಕೆ ಹೊಂದಿದ್ದಾರೆ. ಅವರ ಈ ಎಲ್ಲ ಪರಿಶ್ರಮಕ್ಕೆ ಪತಿ ಅಗತ್ಯ ನೆರವು ನೀಡುತ್ತಿದ್ದಾರೆ. ಅವರು ಇಬ್ಬರು ಮಕ್ಕಳು ಸದ್ಯ ಹೊರಗೆ ದುಡಿಯುತ್ತಿದ್ದು ಮುಂದಿನ ದಿನಗಳಲ್ಲಿ ಇಲ್ಲಿಯೇ ಬಂದು ಕೃಷಿಯನ್ನು ಇನ್ನಷ್ಟು ಸದೃಢಗೊಳಿಸುವ ಆಸೆ ಇಟ್ಟುಕೊಂಡಿದ್ದಾರೆ. ಮಹಿಳೆಯಾಗಿ ಏನು ಮಾಡಬಹುದು ಅಥವಾ ಕಡಿಮೆ ಜಮೀನಿದ್ದರೆ ತುಂಬಾ ಕಷ್ಟ ಎನ್ನುವವರಿಗಾಗಿ ಇವರು ಉತ್ತಮ ಉದಾಹರಣೆಯಲ್ಲವೇ? **ಇವರ ಸಾಧನೆಗಳನ್ನು ಗುರುತಿಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯ ೨೦೧೩ ರಲ್ಲಿ ಶ್ರೇಷ್ಠ ಕೃಷಿಕ ಮಹಿಳೆ ಪ್ರಶಸ್ತಿ ಸಹ ನೀಡಿ ಗೌರವಿಸಿದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ತೂಗಬಲ್ಲದೆಂಬ ಗಾದೆಗೆ ಉತ್ತಮ ನಿದರ್ಶನವಾದ ಇವರು ನಿಜವಾಗಲು ಅಭಿನಂದನಾರ್ಹರು. ಶ್ರೀಮತಿ ಬಸಮ್ಮ ಅವರ ಸಂಪರ್ಕ ಸಂಖ್ಯೆ – ೯೬೮೬೧೩೮೯೪೨**

****